Ref.No. 72–2023

WW–1,

ದಿನಾಂಕಃ 22–09–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು 01.01.2010 ರಂದು ಗುತ್ತಿಗೆ ಆದಾರದ ಮೇರೆಗೆ 2 ನೇ ಪಾರ್ಟಿ ಸಂಸ್ಥೆ ಗೆ ಸೇರಿಕೊಂಡಿರುತ್ತೇನೆ. ನಂತರ ಟೈ ಬಾಂಡ್ ಕಾಂಟ್ರಾಕ್ಟ್ ಮೇರೆಗೆ 2 ನೇ ಪಾರ್ಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆನು. 2014 ರಲ್ಲಿ 2 ನೇ ಪಾರ್ಟಿ ಆಡಳಿತ ವರ್ಗದವರು ನನ್ನನ್ನು ಸೂಪಾರ್ ವೈಸರ್ ಆಗಿ ನೇಮಿಸಿರುತ್ತಾರೆ ಎಂದರೆ ಸರಿ . ಆಗ 9 ತಿಂಗಳು ಪ್ರೋಬೇಷನರಿ ಪೀರಿಯಡ್ ನಲ್ಲಿ ನನ್ನನ್ನು ಇರಿಸಿ ನನಗೆ 8,100 ರೂಪಾಯಿಗಳ ಸಂಬಳವನ್ನು 2 ನೇ ಪಾರ್ಟಿ ಸಂಸ್ಥೆಯವರು ನೀಡುತ್ತಿದ್ದರು. 2 ನೇ ಪಾರ್ಟಿ ಸಂಸ್ಥೆಯವರು ಅಗರಬತ್ತಿಯನ್ನು ತಯಾರಿಸುತ್ತಾರೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯವರ ಯೂನಿಟ್ ಗಳು ಭಾರತದ ಹಲವು ಕಡೆ ಮತ್ತು ಹೊರ ದೇಶಗಳಲ್ಲಿ ಇರುತ್ತದೆ ಎಂದರೆ ಸರಿ . ಒಂದು ಯೂನಿಟ್ ಮೈಸೂರಿನಲ್ಲಿ ಮ್ತು ಒರಿಸ್ಸಾದ ಬಾಲಸೋರ್ ನಲ್ಲಿ ಇರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯ ಅಗರಬತ್ತಿಗಳಿಗೆ ಪ್ರಪಂಚದಲ್ಲಿ ತುಂಬಾ ಬೇಡಿಕೆ ಇರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಸುಮಾರು 3000 ಜನ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ . ನಿ ಡಬ್ಲ್ಯೂ –16 Appointment order ನ Clause 9 ನಲ್ಲಿ ನನ್ನನ್ನು ಒಂದು ಕಡೆಯಿಂದ ಇನ್ನೊಂದು ಕಡೆ ವರ್ಗವ ಣೆ ಮಾಡಬಹುದೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿ ಡಬ್ಲ್ಯೂ – 16 ರಲ್ಲಿ ನಮೂದಿಸಿರುವ ಷರತ್ತು ಗಳನ್ನು ನಾನು ಓದಿದ ನಂತರ ಸಹಿ ಹಾಕಿರುತ್ತೇನೆ ಎಂದರೆ ಸರಿ . ನಾನು 2 ನೇ ಪಾರ್ಟಿ ಸಂಸ್ಥೆ ಯ ಮೆನೆಂಟೆನ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು ಒಳ್ಳೆಯ ಕಾರ್ಮಿಕನಾಗಿದ್ದೆನು ಎಂದರೆ ಸರಿ . ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಯಾವುದೇ ದುರ್ನಡತೆಯ ಬಗ್ಗೆ ನನಗೆ ಛಾರ್ಜ್ ಶೀಟ್ ನ್ನು ಪಡೆದಿರುವುದಿಲ್ಲ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯ ಆಡಳಿತ ವರ್ಗದವರಿಗೆ ನಾನು ಸರಿಯಾಗಿ ಕೆಲಸಕ್ಕೆ ಬರುತ್ತಿಲ್ಲ ಎಂದು ಮಾತ್ರ ಬೇಸರವಿತ್ತು ಎಂದರೆ ಸರಿಯಲ್ಲ. ನಿ ಡಬ್ಲ್ಯೂ–16 ರ ಕ್ಲಾಸ್ 11 ರಲ್ಲಿ ಯಾವ ಕಾರಣಗಳಿಗೆ ಕೆಲಸದಿಂದ ತೆಗೆದು ಹಾಕಬಹುದೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಾನು ಕೆಲಸ ಮಾಡುತ್ತಿದ್ದ ಸಂದರ್ಬದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ . ನಾನು ಆ ರೀತಿ ತಮಿಳುನಾಡು ಮತ್ತು ಆಂದ್ರ ಪ್ರದೇಶ ರಾಜ್ಯಗಳಿಗೆ ಹೋಗಿರುತ್ತೇನೆ. ಮೈಸೂರಿನ ಯೂನಿಟ್ ನಲ್ಲಿ ಕೆಲಸ ಮಾಡುವ ಕೆಲಸಗಾರರನ್ನು 2 ನೇ ಪಾರ್ಟಿ ಸಂಸ್ಥೆಯವರು ಬೇರೆ ಬೇರೆ ರಾಜ್ಯ ಮತ್ತು ಹೊರದೇಶಗಳಿಗೆ ವರ್ಗವಣೆಯನ್ನು ಮಾಡುತ್ತಾರೆ ಎಂದರೆ ಸರಿ . ಕೆಲಸಗಾರರರು ಬೇರೆ ರಾಜ್ಯ ಮತ್ತು ಹೊರ ದೇಶಗಳಿಗೆ ವರ್ಗಾವಣೆ ಹೊಂದಿದಾಗ ಅಲ್ಲಿಗೆ ಹೋಗಿ ಕೆಲಸ ಮಾಡುತ್ತಾರೆ ಎಂದರೆ ಸರಿ .

ನಾನು ಒಳ್ಳೆಯ ಕೆಲಸಗಾರನಾಗಿದ್ದರಿಂದ 2 ನೇ ಪಾರ್ಟಿ ಸಂಸ್ಥೆ ಯಲ್ಲಿ ನನಗೆ ಭಾರಿ ಬೇಡಿಕೆ ಇರುತ್ತದೆ ಎಂದರೆ ಸರಿ . ಬಾಲಸೂರ್ ಯೂನಿಟ್ ಗೆ ನನ್ನ ಅವಶ್ಯಕತೆ ಇದೆ ಎಂದು ಅಲ್ಲಿಂದ ಬೇಡಿಕೆ ಬಂದಿದ್ದರಿಂದ ನನ್ನನ್ನು 06.04.2022 ರಲ್ಲಿ ಅಲ್ಲಿಗೆ ವರ್ಗವಣೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ವರ್ಗಾವಣೆ ಆದೇಶವನ್ನು ಪಡೆದುಕೊಳ್ಳದೇ ಇದ್ದುದರಿಂದ ಆಡಳಿತ ವರ್ಗದವರು ಆದೇಶವನ್ನು ನನ್ನ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿದಾರರು ನನಗೆ 3 ತಿಂಗಳು ಕೆಲಸವನ್ನು ನೀಡದೇ ನಂತರ ಆದೇಶವನ್ನು ನನ್ನ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ . 2 ನೇ ಪಾರ್ಟಿ ಸಂಸ್ಥೆಯವರು ನನಗೆ ಕೆಲಸವನ್ನು ನೀಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ .

ನಮ್ಮ ಸಂಸ್ಥೆ ಯಲ್ಲಿ ಹೆಚ್ ಆರ್ ಮ್ಯಾನೇಜರ್, ಮೀನಾಕ್ಷಿ ಇರುತ್ತಾರೆ ಎಂದರೆ ಸರಿ . ನಾನು ಕೆಲಸಕ್ಕೆ ಹೋಗದೇ ಇದ್ದಾಗ ಸದರಿಯವರು ನನ್ನನ್ನು ಕರೆದು ಕೌನ್ಸಿಲಿಂಗ್ ಮಾಡಿ ಕೆಲಸಕ್ಕೆ ಬರುವಂತೆ ಹೇಳುತ್ತಿದ್ದರು ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಮೀನಾಕ್ಷಿಯವರು ಕೆಲಸವನ್ನು ಬಿಟ್ಟು ಹೋಗುವಂತೆ ಸೂಚಿಸಿದರು ಎಂದು ನುಡಿಯುತ್ತಾರೆ . ಮೀನಾಕ್ಷಿಯವರು ಕೆಲಸವನ್ನು ಬಿಟ್ಟು ಹೋಗುವಂತೆ ಸೂಚಿಸಿರುವುದಿಲ್ಲ ಕೆಲಸಕ್ಕೆ ಬರುವಂತೆ ಕೌನ್ಸಿಲಿಂಗ್ ಮಾಡಿದರು ಎಂದರೆ ಸರಿಯಲ್ಲ .

ವರ್ಗಾವಣೆ ಯಾದ ನಂತರ ರಿಪೋರ್ಟ್ ಮಾಡಲು 2 ವಾರ ಸಮಯವನ್ನೂ ನೀಡಿದ್ದರೂ ಸಹ ನಾನು ಕೆಲಸಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿ . ನಾನು ಆಡಳಿತ ವರ್ಗದವರಿಗೆ ನಿ ಡಬ್ಲ್ಯೂ-10 ಮತ್ತು 11 ರಂತೆ ಪತ್ರಗಳನ್ನು ಬರೆದು ನಾನಿನ್ನೂ ಅವಿವಾಹಿತ ಮದುವೆ ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರಿಗೆ ಆಸ್ಪತ್ರೆಯ ಸೌಲಭ್ಯಗಳನ್ನು ನೀಡಬೇಕಾಗಿರುತ್ತದೆ ಆದುದರಿಂದ ಸದರಿ ಸೌಲಭ್ಯವನ್ನು ನೀಡಿದ್ದಲ್ಲಿ ನಾನು ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳುತ್ತೇನೆ ಎಂದರೆ ಸರಿ . ನಂತರ ಆಡಳಿತ ವರ್ಗ ದವರು ನನ್ನ ತಂದೆಗೆ ಆಸ್ಪತ್ರೆಯ ಸೌಲಭ್ಯಗಳನ್ನು ಕೊಡುತ್ತೇವೆ, ಮದುವೆಯಾಗುವ ಸಂದರ್ಭದಲ್ಲಿ ರಜೆಯನ್ನು ನೀಡುತ್ತೇವೆ , ರಿ ಲೋಕೇಷನ್ ಚಾರ್ಜ್ಸ್ ಕೊಡುತ್ತೇವೆ ಮತ್ತು ಸಂಬಳವನ್ನು ಹೆಚ್ಚು ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ಈಗ ಆಡಳಿತ ವರ್ಗದವರು ಸದರಿ ಸೌಲಭ್ಯ ಗಳನ್ನು ನೀಡಿದ್ದಲ್ಲಿ ನಾನು ಬಾಲಸೂರ್ ಗೆ ಹೋಗಿ ಕೆಲಸ ಮಾಡಲು ಸಿದ್ದನಾಗಿರುವುದಿಲ್ಲ . ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನನಗೆ ಸರಿಯಾಗಿ ಸಂಬಳವನ್ನು ಆಡಳಿತ ವರ್ಗ ದವರು ನೀಡಿರುವುದಿಲ್ಲ ಆದ್ದದುರಿಂದ ನಾನು ಈಗ ಬಾಲಸೂರ್ ಗೆ ಹೋಗಿ ಕೆಲಸ ಮಾಡಲು ಸಿದ್ದನಾಗಿರುವುದಿಲ್ಲ . ನಾನು ಕೆಲಸ ಮಾಡಿದ ಅವಧಿಗೆ ಆಡಳಿತ ವರ್ಗ ದವರು ನನಗೆ ಸಂಬಳವನ್ನು ನೀಡಿದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನಾನು ಬಾಲಸೂರ್ ಗೆ ಹೋಗಿ ಕೆಲಸಕ್ಕೆ ರಿಪೋರ್ಟ್ ಮಾಡದೇ ಇದ್ದುದರಿಂದ ಸದರಿ ಯೂನಿಟ್ ನವರು Articles of charge ಅನ್ನು ನೀಡಿ ತನಿಖೆಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಆಡಳಿತ ವರ್ಗದವರು ನನ್ನನ್ನು ವರ್ಗಾವಣೆ ಮಾಡಿದ್ದು ನನ್ನ ಎಂಪ್ಲಾಯ್ ಮೆಂಟ್ ಕಾಂಟ್ರಾಕ್ಟ್ ಅಡಿಯಲ್ಲಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ . ವರ್ಗಾವಣೆಯನ್ನು ಪ್ರಶ್ನಿಸಿರುವುದನ್ನು ಹೊರತು ಪಡಿಸಿ ಬೇರೆ ಯಾವುದೇ ವಿಚಾರದ ಬಗ್ಗೆ ನಾನು ಕಾರ್ಮಿಕ ಇಲಾಖೆಗೆ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ದೂರುಗಳ ಪ್ರತಿಯನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೆ. ನನಗೆ ನವೆಂಬರ್ –2021 ರಲ್ಲಿ 15 ದಿನಗಳ ಸಂಬಳವನ್ನು 2 ನೇ ಪಾರ್ಟಿ ಸಂಸ್ಥೆಯವರು ನೀಡಿರುವುದಿಲ್ಲ. ನಂತರ ಡಿಸೆಂಬರ್ ತಿಂಗಳಿನಿಂದ ಮಾರ್ಚ್ ತಿಂಗಳಿನವರೆಗೆ ನಾನು ಮೈಸೂರಿನಿನ ಯೂನಿಟ್ ನಲ್ಲಿ ಕೆಲಸ ಮಾಡಿರುವುದಿಲ್ಲ ಆದುದರಿಂದ ನನಗೆ ಸಂಬಳವನ್ನು 2 ನೇ ಪಾರ್ಟಿ ಸಂಸ್ಥೆಯವರು ನೀಡಿರುವುದಿಲ್ಲ ಎಂಬ ಸೂಚೆನೆಗೆ ಸಾಕ್ಷಿದಾರರು 2 ನೇ ಪಾರ್ಟಿ ಸಂಸ್ಥೆಯವ ರು ಕೆಲಸವನ್ನು ನೀಡದೇ ರಿಸೈನ್ ಮಾಡಿ ಎಂದು ಸೂಚಿಸಿರುತ್ತಾರೆ ಎಂದು ನುಡಿಯುತ್ತಾರೆ . ನಾನೇ ಕೆಲಸಕ್ಕೆ ಹೊಗದಿದ್ದರೂ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆಯವರು ಕೆಲಸವನ್ನು ನೀಡದೇ ಇದ್ದಾಗ ನಾನು ಕಾರ್ಮಿಕ ಇಲಾಖೆಯಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ . ನನಗೆ ನವೆಂಬರ್ ತಿಂಗಳಿನಿಂದ ಸಂಬಳವನ್ನು 2 ನೇ ಪಾರ್ಟಿ ಸಂಸ್ಥೆ ಯವರು ನೀಡದೇ ಇದ್ದಾಗ ನಾನು ಕಾರ್ಮಿಕ ಇಲಾಖೆಗೆ ವೇತನ ಪಾವತಿ ಕಾಯಿದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ಅರ್ಜಿಯ ಪ್ರತಿಯನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ನಿ ಡಬ್ಲ್ಯೂ–13 ಸದರಿ ಅರ್ಜಿ ಯಾಗಿರುತ್ತದೆ ಎಂದು ನುಡಿಯುತ್ತಾರೆ ನಿ ಡಬ್ಲ್ಯೂ –13 ವರ್ಗಾವಣೆ ಬಗ್ಗೆ ಆಗಿದ್ದು ವೇತನ ಪಾವತಿ ಕಾಯಿದೆ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯಾಗಿರುವುದಿಲ್ಲ ಎಂದರೆ ಸರಿಯಲ್ಲ .

ನನ್ನ ಸೇವೆ ಬಾಲಸೂರ್ ನಲ್ಲಿ ಅವಶ್ಯಕತೆ ಇರುವುದರಿಂದ ನಾನು ಅಲ್ಲಿಗೆ ಹೋದಲ್ಲಿ ಈಗಲೂ ಕೂಡ ಆಡಳಿತ ವರ್ಗದವರು ನನಗೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತಾರೆ ಎಂಬ ಸೂಚನೆಗೆ ಸಾಕ್ಷಿದಾರರು ಇಲ್ಲಿಯವರೆಗೆ ವೇತನವನ್ನು ನೀಡಿದ್ದಲ್ಲಿ ಹೋಗಲು ಸಿದ್ದನಿರುತ್ತೇನೆ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ನಾನು ಕೆಲಸ ಮಾಡಲು ಸಿದ್ದನಿದ್ದು 2 ನೇ ಪಾರ್ಟಿ ಸಂಸ್ಥೆಯವರು ನನಗೆ ಕೆಲಸ ಕೊಡದೇ ಇದ್ದುದರಿಂದ ನಾನು ಇಲ್ಲಿಯವರೆಗಿನ ವೇತನಕ್ಕೆ ಅರ್ಹನಾಗಿರುತ್ತೇನೆ ಎಂದು ನುಡಿಯುತ್ತಾರೆ . ಅಕ್ಟೋಬರ್ 2021 ರಲ್ಲಿ ನನ್ನ ತಾಯಿ ತೀರಿಕೊಂಡಿರುತ್ತಾರೆ. ಆ ಕಾಲಕ್ಕೆ ನನ್ನ ತಾಯಿಗೆ 70 ವರ್ಷಗಳಷ್ಟು ವಯಸಾಗಿರುತ್ತದೆ. ನಾನು ಈಗ ಯಾವುದೇ ಕೆಲಸವನ್ನು ಮಾಡುತ್ತಿಲ್ಲ ಸಾಲ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. 2 ನೇ ಪಾರ್ಟಿ ಸಂಸ್ಥೆಯವರು ನನ್ನನ್ನು ವರ್ಗಾವಣೆ ಮಾಡಿದ್ದು ಸರಿಯಾಗಿದ್ದು ನಾನು ಯಾವುದೇ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ  ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.